# ಇಂದ್ರಿಯಗಳ ನಿಗ್ರಹವೇ ತಪಸ್ಸು: ಸ್ವರ್ಣವಲ್ಲೀ ಶ್ರೀ

ಪ್ರಜಾವಾಣಿ ವಾರ್ತೆ

**ಶಿರಸಿ:** 'ಇಂದ್ರಿಯಗಳ ಭೋಗದಿಂದ ಬರುವ ಸುಖ ತಾತ್ಕಾಲಿಕ. ಇಂದ್ರಿಯಗಳ ನಿಗ್ರಹದಿಂದ ಶಾಶ್ವತವಾದ ನೆಮ್ಮದಿ ಹಾಗೂ ಸಾತ್ವಿಕವಾದ ನೆಮ್ಮದಿ ಲಭಿಸಲು ಸಾಧ್ಯ' ಎಂದು ಸ್ವರ್ಣವಲ್ಲೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಹೇಳಿದರು.

ಅವರು ಸ್ವರ್ಣವಲ್ಲೀ ಮಠದಲ್ಲಿ ನಡೆಯುತ್ತಿರುವ ಚಾತುರ್ಮಾಸ ವ್ರತಾಚರಣೆಯಲ್ಲಿ ಶನಿವಾರ ಗುಂದ ಸೀಮೆ, ಛಾಪಖಂಡ ಭಾಗದ ಶಿಷ್ಯರು ಸಲ್ಲಿಸಿದ ಗುರು ಸೇವೆ ಸ್ವೀಕರಿಸಿ ಅವರು ಆಶೀರ್ವಚನ ನುಡಿದರು.

'ಪ್ರತಿಯೊಂದಕ್ಕೂ ನಮ್ಮ ಮನಸ್ಸು ಮುಖ್ಯ ಕಾರಣ. ಅದನ್ನು ನಿಗ್ರಹಿಸಿದರೆ ಎಲ್ಲವನ್ನೂ ನಿಗ್ರಹಿಸುವ ಸಾಮರ್ಥ್ಯ ನಮ್ಮಲ್ಲಿ ಬರುತ್ತದೆ. ನಮ್ಮನ್ನು ಧರ್ಮಾಚರಣೆಯಲ್ಲಿ ತೊಡಗಿಸುತ್ತದೆ' ಎಂದರು.

'ಲೋಕದಲ್ಲಿ ಎಲ್ಲ ಪ್ರಾಣಿಗಳೂ



ಶಿರಸಿಯ ಸ್ವರ್ಣವಲ್ಲೀ ಮಠದಲ್ಲಿ ನಡೆಯುತ್ತಿರುವ ಚಾತುರ್ಮಾಸ ವ್ರತಾಚರಣೆಯಲ್ಲಿ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಶಿಷ್ಯರು ಸಲ್ಲಿಸಿದ ಗುರು ಸೇವೆ ಸ್ವೀಕರಿಸಿದರು

ಅವುಗಳದ್ದೇ ಇಂದ್ರಿಯಗಳ ಆಕರ್ಷಣೆಯಿಂದಾಗಿ ಪ್ರಾಣ ಬಿಡುತ್ತವೆ. ಇಂದ್ರಿಯಗಳ ಆಕರ್ಷಣೆಯನ್ನು ತಡೆಗಟ್ಟಲು ಪ್ರಯತ್ನ ಬೇಕು. ಅದನ್ನು ತಡೆಗಟ್ಟಿದರೆ ತಪಸ್ಸಾಗುತ್ತದೆ. ನಮ್ಮ ಜೀವನದ ಶ್ರೇಯಸ್ಸಿಗೂ ಕಾರಣವಾಗುತ್ತದೆ. ಇಂದ್ರಿಯಗಳನ್ನು ಹರಿದು ಬಿಟ್ಟರೆ ಅದು ನರಕ. ಮಾನಸಿಕ, ದೈಹಿಕ ಆರೋಗ್ಯ ಕೆಡುತ್ತದೆ. ಇಂದ್ರಿಯಗಳನ್ನು ಹರಿ ಬಿಡುವುದರಿಂದ ಪಾಪಗಳು ಹೆಚ್ಚುತ್ತವೆ. ಎಲ್ಲ ಪಾಪಗಳಿಗೂ ಮೂಲ ಕಾರಣ ಇಂದ್ರಿಯಗಳನ್ನು ಹರಿದು ಬಿಡುವುದೇ ಆಗಿದೆ. ಇಂದ್ರಿಯಗಳ ಆಕರ್ಷಣೆಯಿಂದ ಅನೇಕ ತಪ್ಪು ಕಾರ್ಯಗಳು ಆಗುತ್ತವೆ. ಅನೇಕ ದುಷ್ಟ ಕೆಲಸಗಳಿಗೂ ಇದೆ ಕಾರಣ' ಎಂದು ಹೇಳಿದರು. 'ಇಂದ್ರಿಯ ನಿಗ್ರಹ ಮಾಡಿಕೊಳ್ಳುವ ಮೂಲಕ ತಪಸ್ಸನ್ನು ಸಿದ್ಧಿಸಿಕೊಳ್ಳಬಹುದು. ಇಂದ್ರಿಯಗಳ ನಿಗ್ರಹ ಸಂಪಾದಿಸಿಕೊಳ್ಳಲು ಸದಾ ಕಾಲ ಅನುಷ್ಠಾನಕ್ಕೆ ತೊಡಗುವುದು ಒಳ್ಳೆಯ ಸಾಧನ' ಎಂದರು.

ಕಿರಿಯ ಯತಿಗಳಾದ ಆನಂದಬೋಧೇಂದ್ರ ಸರಸ್ವತೀ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸೀಮಾ ಅಧ್ಯಕ್ಷ ದತ್ತಾತ್ರೇಯ ಹೆಗಡೆ ತಮ್ಮಣಗಿ, ಶಿವಾನಂದ ಪಾಟೀಲ, ಮಾತೃಮಂಡಳಿಯ ಪ್ರಮುಖರಾದ ಸೀತಾ ದಾನಗೇರಿ, ವಿಶಾಲಾಕ್ಷಿ ಭಟ್ ಪಟೋಳಿ ಇದ್ದರು.